ಎಲ್.ಎ.ಸಿ.ಸಂಖ್ಯೆ: 143/2018
ಪಿ ಡಬ್ಲೂ: 1

ದಿನಾಂಕ:*26.09.2025* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: *2* ನೇ ಎದುರುದಾರರ ಪರವಾಗಿ ಶ್ರೀ ಕೆ ಎಂ ಜೆ ವಕೀಲರಿಂದ *:-*</u>

3. ಹೆಬ್ಬೂರು ಗ್ರಾಮದ ಸರ್ವೇ ನಂಬರ್ 6/2 ರಲ್ಲಿ ನಿಮಗೆ ಸೇರಿದ 4 ಗುಂಟೆ ವಿಸ್ತೀರ್ಣದ ಖುಷ್ಕಿ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ನೀವು ರೂ.22,952/- ಹಣವನ್ನು ಪರಿಹಾರವಾಗಿ ಪಡೆದುಕೊಂಡಿದ್ದೀರಿ ಎಂದರೆ ಸರಿ. ನಿಮ್ಮ ಜಮೀನಿನಲ್ಲಿದ್ದ ಮರ ಗಿಡಗಳನ್ನು ಹೊರತುಪಡಿಸಿ ಕೇವಲ ಜಮೀನಿಗೆ ಗುಂಟೆಗೆ ರೂ.1,296/- ರಂತೆ ಪರಿಹಾರವನ್ನು ನೀಡಲಾಗಿದೆ ಎಂದರೆ ಸರಿ. ಆವಾರ್ಡ್ ನೋಟೀಸನ್ನು ಪಡೆದುಕೊಂಡ ಬಳಿಕ ಸಕಾಲದಲ್ಲಿ ಭೂಸ್ವಾಧೀನಾಧಿಕಾರಿಗಳಿಗೆ ತಕರಾರು ಅರ್ಜಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ವೈಜ್ಞಾನಿಕವಾಗಿ ಉಪನೋಂದಣಾಧಿಕಾರಿಗಳು ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ನೀಡಿರುವ ಮೌಲ್ಯದ ಮೇರೆಗೆ ಪರಿಹಾರದ ಹಣವನ್ನು ನೀಡಲಾಗಿದೆ ಎಂದರೆ ಸಾಕ್ಷಿ ಕಡಿಮೆಯಾಗಿದೆ ಎನ್ನುತ್ತಾರೆ.

4. ಭೂಸ್ವಾಧೀನಗೊಂಡ ನಿಮ್ಮ ಜಮಿನಿನಲ್ಲಿ ಈರುಳ್ಳಿ, ಮೆಣಸಿನಕಾಯಿ ಮತ್ತು ಇತರೆ ಬೆಳೆಗಳನ್ನು ಬೆಳೆದಿದ್ದಾಗಿದು, ಅದರಿಂದ ಪ್ರತಿವರ್ಷ 10 ಕ್ವಿಂಟಾಲ್ ಈರುಳ್ಳಿ, 2 ಕ್ವಿಂಟಾಲ್ ಮೆಣಸಿನ ಕಾಯಿಯನ್ನು ಬೆಳೆದು ಅದರಿಂದ ಪ್ರತಿವರ್ಷ ಒಂದು ಲಕ್ಷ ಆದಾಯವನ್ನು ನೀವು ಪಡೆದುಕೊಳ್ಳುತ್ತಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 2015 ನೇ ಇಸವಿಯಲ್ಲಿ ಸಹ ಸದರಿ ಬೆಳೆಗಳನ್ನು ಬೆಳೆದಿದ್ದಾಗಿ ಅದನ್ನು ಭೂಸ್ವಾಧೀನಾಧಿಕಾರಿಗಳು ಪರಿಗಣಿಸಿಲ್ಲವೆಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅದನ್ನು ನಿರೂಪಿಸಲು ನೀವು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

5. ಭೂ ಸ್ವಾಧೀನಗೊಂಡ ಸಮಯದಲ್ಲಿ ನಿಮ್ಮ ಜಮೀನಿನ ಬೆಲೆ ಪ್ರತಿ ಗುಂಟೆಗೆ ರೂ.2 ಲಕ್ಷದಿಂದ 2 ವರೆ ಲಕ್ಷಕ್ಕೂ ಹೆಚ್ಚು ಬೆಲೆಬಾಳುತ್ತಿತ್ತು ಮತ್ತು ಆ ಸಮಯಕ್ಕೆ ಅದರ ಮೌಲ್ಯ ರೂ.8 ಲಕ್ಷದಿಂದ 10 ಲಕ್ಷಕ್ಕೂ ಅಧಿಕ ಇತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅಜ್ಜಂಪುರ ನಗರ ಮತ್ತು ದಾವಣಗೆರೆ- ಮಂಗಳೂರು ಹೆದ್ದಾರಿಯ ಹತ್ತಿರ ನಿಮ್ಮ ಜಮೀನು ಬರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅಜ್ಜಂಪುರ ರೈಲ್ವೆ ನಿಲ್ದಾಣದಿಂದ ನಮ್ಮ ಜಮೀನಿಗೆ ಅರ್ಧ ಕಿಲೋ ಮೀಟರ್ ದೂರವಾಗುತ್ತದೆ. ಆ ರೀತಿ ನೀವು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಈ ಪ್ರಕರಣದ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿದ ಬಳಿಕ ಅಜ್ಜಂಪುರವನ್ನು ತಾಲ್ಲೂಕು ಎಂದು ಘೋಷಿಸಲಾಗಿದೆ ಎಂದರೆ ಸರಿ.

6. ಭೂ ಸ್ವಾಧೀನಾಧಿಕಾರಿಗಳು ಪರಿಹಾರದ ಹಣವನ್ನು ನೀಡುವಲ್ಲಿ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಯ ಜಮೀನಿಗೆ ತಾರತಮ್ಯ ಎಸಗಿದ್ದಾರೆ ಎಂದು ನೀವು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆಯಾ ಗ್ರಾಮಗಳಲ್ಲಿರುವ ನೋಂದಣಿ ಮೌಲ್ಯವನ್ನು ಪರಿಗಣಿಸಿ ಅದಕ್ಕೆ ತಕ್ಕಂತೆ ಪರಿಹಾರದ ಹಣವನ್ನು ಘೋಷಿಸಲಾಗಿದೆ ಎಂದರೆ ಸರಿಯಲ್ಲ. ಹೆಬ್ಬೂರು ಗ್ರಾಮದಲ್ಲಿ ನಿಮ್ಮ ಜಮೀನಿಗೆ ಒಂದು ಬೆಲೆ ಮತ್ತು ಪಕ್ಕದ ಜಮೀನಿಗೆ ಇನ್ನೊಂದು ಬೆಲೆ ಘೋಷಿಸಿ ಪರಿಹಾರ ನೀಡಲಾಗಿದೆಯೇ ಎಂದರೆ ಸಾಕ್ಷಿ ನಮ್ಮ ಜಮೀನಿಗೆ ಸರಿಯಾದ ಪರಿಹಾರವನ್ನು ನೀಡಿಲ್ಲ ಎನ್ನುತ್ತಾರೆ.

7. ಭೂ ಸ್ವಾಧೀನಗೊಂಡ ಸಮಯದಲ್ಲಿ ನಿಮ್ಮ ಜಮೀನು ಒಂದು ಗುಂಟೆಗೆ ರೂ.1,296/-ಕ್ಕಿಂತ ಹೆಚ್ಚು ಬೆಳೆ ಬಾಳುತ್ತಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನೀವು ಹೇಳಿದಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಜ್ಜಂಪುರ, ಅತ್ತಿಮೊಗ್ಗೆ ಮತ್ತು ಹೆಬ್ಬೂರು ಗ್ರಾಮಗಳು ಒಂದೇ ರೀತಿ

ಅಭಿವೃದ್ಧಿ ಹೊಂದಿವೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅಜ್ಜಂಪುರದ ಸ್ವತ್ತುಗಳಿಗೆ ಎಷ್ಟು ಬೆಲೆ ಇದೆಯೋ ಅಷ್ಟೇ ಬೆಲೆ ನಿಮ್ಮ ಗ್ರಾಮದ ಸ್ವತ್ತುಗಳಿಗೂ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನೀವು ಹೇಳಿದಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಜ್ಜಂಪುರ ಇತ್ತಿಚೇಗೆ ತಾಲ್ಲೂಕು ಎಂದು ಘೋಷಿಸಲ್ಪಟ್ಟಿದ್ದು, ಹೆಬ್ಬೂರು ಮತ್ತು ಅತ್ತಿಮೊಗ್ಗೆ ಇಂದಿಗೂ ಸಹ ಗ್ರಾಮಗಳಾಗಿ ಉಳಿದುಕೊಂಡಿವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೆಬ್ಬೂರು ಗ್ರಾಮ ಗೌರಪುರ ಗ್ರಾಮ ಪಂಚಾಯ್ತಿಗೆ ಬರುತ್ತದೆ ಎನ್ನುತ್ತಾರೆ.

8. ನಿಪಿ.12 ರಿಂದ ನಿಪಿ.15 ಕ್ರಯ ಪತ್ರಗಳು ಅಜ್ಜಂಪುರ ಗ್ರಾಮಕ್ಕೆ ಸಂಬಂಧಿಸಿದವು ಎಂದರೆ ಸರಿ. ಹಾಗಾಗಿ ಸದರಿ ಕ್ರಯಪತ್ರಗಳು ನಿಮ್ಮ ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ನಿಪಿ.16 ಈ ಪ್ರಕರಣದ ಕಲಂ 4(1) ರ ಅಧಿಸೂಚನೆಯ ನಂತರದ ದಾಖಲೆ ಎಂದರೆ ಸರಿ. ನಿಪಿ.20 ಮತ್ತು ಪಿ.21 ದಾಖಲೆಗಳು 4 ನೇ ಪ್ಯಾಕೇಜ್ ಗೆ ಸಂಬಂಧಿಸಿದ್ದು ನಿಮ್ಮ ಜಮೀನು ಪ್ಯಾಕೇಜ್ 3 ಕ್ಕೆ ಸಂಬಂಧಿಸಿದಂತೆ ಸ್ವಾಧೀನಗೊಂಡಿದೆ ಎಂದರೆ ಸರಿ. ಹಾಗಾಗಿ ಸದರಿ ದಾಖಲೆಗಳು ನಿಮ್ಮ ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ.

9.ನಿಪಿ.22 ರಿಂದ 24 ದಾಖಲೆಗಳು ಹೆಬ್ಬೂರು ಗ್ರಾಮಕ್ಕೆ ಸೇರಿದ್ದು ಭೂ ಪರಿವರ್ತನೆಗೊಂಡಿರುವ ಜಮಿನಿಗೆ ಸಂಬಂಧಿಸಿದ್ದು ಮತ್ತು ಈ ಪ್ರಕರಣದ ಪ್ರಾಥಮಿಕ ಅಧಿಸೂಚನೆಯ ನಂತರದ ದಾಖಲೆಗಳು ಎಂದರೆ ಸರಿ. ಸದರಿ ದಾಖಲೆಗಳು ಹೆಬ್ಬೂರು ಗ್ರಾಮದ ಮಧ್ಯಭಾಗದಲ್ಲಿರುವ ಸ್ವತ್ತಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ನಿಪಿ.25 ದಾಖಲೆ ಈ ಪ್ರಕರಣದ ಪ್ರಾಥಮಿಕ ಅಧಿಸೂಚನೆಯ ನಂತರದ ದಾಖಲೆ ಎಂದರೆ ಸರಿ.

10. ನಿಪಿ.26 ದಾಖಲೆ ಅಜ್ಜಂಪುರ ಗ್ರಾಮಕ್ಕೆ ಸಂಬಂಧಿಸಿದ್ದಾಗಿದ್ದು, ರಾಜ್ಯ ಹೆದ್ದಾರಿಗೆ ಸಂಬಂಧಿಸಿದ್ದು ಅದಕ್ಕೆ ಸಂಬಂಧಿಸಿದ ಅಧಿಸೂಚನೆ ಸಹ ಬೇರೆಯಾಗಿದೆ ಹಾಗಾಗಿ ಸದರಿ ದಾಖಲೆಗಳಿಗೂ ನಿಮ್ಮ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸ್ವಾಧೀನಗೊಂಡ ನಿಮ್ಮ ಜಮೀನಿನಲ್ಲಿ ಬೋರ್ ವೆಲ್ ಇತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸಾಕ್ಷಿ ಅದು ಸ್ವಾಧೀನಗೊಂಡ ಜಮೀನಿನಲ್ಲಿ ಇಲ್ಲ ನನಗೆ ಉಳಿದಿರುವ ಜಮೀನಿನಲ್ಲಿದೆ ಎನ್ನುತ್ತಾರೆ.

11. ನಿಪಿ.27 ರಿಂದ ಪಿ.31 ದಾಖಲೆಗಳು ಸಹ ಈ ಪ್ರಕರಣದ ಪ್ರಾಥಮಿಕ ಅಧಿಸೂಚನೆಯ ನಂತರ ದಾಖಲೆಗಳಾಗಿದ್ದು ಹಾಗಾಗಿ ಸದರಿ ದಾಖಲೆಗಳಿಗೂ ನಿಮ್ಮ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂದರೆ ಸರಿಯಲ್ಲ. ನೀವು ಹೆಚ್ಚಿನ ಪರಿಹಾರವನ್ನು ಕೋರಿ ಸಲ್ಲಿಸಿರುವ ಅರ್ಜಿ ಕಾಲ ಪರಿಮಿತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರವನ್ನು ಕೋರಿ ನೀವು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಯಾವುದೇ ಸಕಾರಣಗಳು ಇಲ್ಲ ಮತ್ತು ನಿಮ್ಮ ಬೇಡಿಕೆಗೆ ಸಂಬಂಧಿಸಿದಂತೆ ಯಾವುದೇ ಪೂರಕವಾದ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರವನ್ನು ಕೋರಿ ನಿಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

*12.* ಸ್ವಾಧೀನಗೊಂಡ ಜಮೀನಿನ ಫಲವತ್ತತೆ, ಅದರಲ್ಲಿದ್ದ ಬೆಳೆಗಳು ಮತ್ತು ಇತ್ಯಾದಿಗಳನ್ನು ಪರಿಗಣಿಸಿ ಭೂ ಸ್ವಾಧೀನಾಧಿಕಾರಿಗಳು ವೈಜ್ಞಾನಿಕವಾಗಿ ಪರಿಹಾರವನ್ನು ಘೋಷಿಸುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಸ್ವಾಧೀನಗೊಂಡ ನಿಮ್ಮ ಜಮಿನಿಗೂ ಸಹ ವೈಜ್ಞಾನಿಕವಾಗಿ ಪರಿಹಾರವನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ವೈಜ್ಞಾನಿಕವಾಗಿ ನೀಡಲಾಗಿದ್ದ ಪರಿಹಾರದ ಹಣವನ್ನು ಪಡೆದುಕೊಂಡಿದ್ದರೂ ಸಹ ಅಕ್ರಮ ಲಾಭ ಗಳಿಸುವ ಸಲುವಾಗಿ ಹೆಚ್ಚಿನ ಪರಿಹಾರವನ್ನು ಕೋರಿ ಯಾವುದೇ ಸಮಂಜಸವಾದ ದಾಖಲೆಗಳನ್ನು

ಹಾಜರುಪಡಿಸದೇ ಸುಳ್ಳು ಅರ್ಜಿಯನ್ನು ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ

***1*** ನೇ ಎದುರುದಾರರ ಪರವಾಗಿ ಶ್ರೀ ಸಿ ಎಸ್ ಸರ್ಕಾರಿ ವಕೀಲರು ***2*** ನೇ ಎದುರುದಾರರ ಪರ ವಕೀಲರು ಮಾಡಿದ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.